ಕೇರಳ ಪಾಠಾವಳಿ

KERALA READER

ಕನ್ನಡ

KANNADA

ತರಗತಿ

I

ಭಾಗ - 1

ಕೇರಳ ಸರಕಾರ
ಸಾರ್ವಜನಿಕ ಶಿಕ್ಷಣ ಇಲಾಖೆ

ತಯಾರಿಸಿದವರು
ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಮಿತಿ (SCERT)
ವಿದ್ಯಾಭವನ ಪೂಜಪುರ, ತಿರುವನಂತಪುರ - 695 012

2024

ST-485-1-KANNADA-1-VOL-1

ರಾಷ್ಟ್ರಗೀತೆ

ಜನಗಣ ಮನ ಅಧಿನಾಯಕ ಜಯಹೇ
ಭಾರತ ಭಾಗ್ಯ ವಿಧಾತಾ
ಪಂಜಾಬ ಸಿಂಧು ಗುಜರಾತ ಮರಾಠ
ದ್ರಾವಿಡ ಉತ್ಕಲ ವಂಗ
ವಿಂಧ್ಯ ಹಿಮಾಚಲ ಯಮುನಾ ಗಂಗಾ
ಉಚ್ಛಲ ಜಲಧಿತರಂಗ
ತವಶುಭ ನಾಮೇ ಜಾಗೇ
ತವಶುಭ ಆಶಿಷ ಮಾಗೇ
ಗಾಹೇ ತವಜಯ ಗಾಥಾ
ಜನಗಣ ಮಂಗಲದಾಯಕ ಜಯಹೇ
ಭಾರತ ಭಾಗ್ಯವಿಧಾತಾ
ಜಯಹೇ ಜಯಹೇ ಜಯಹೇ
ಜಯ ಜಯ ಜಯ ಜಯಹೇ

ಪ್ರತಿಜ್ಞೆ

ಭಾರತವು ನನ್ನ ದೇಶ. ಭಾರತೀಯರೆಲ್ಲರೂ ನನ್ನ ಸಹೋದರ, ಸಹೋದರಿಯರು.

ನಾನು ನನ್ನ ದೇಶವನ್ನು ಪ್ರೀತಿಸುತ್ತೇನೆ. ಅದರ ಸಂಪನ್ನ ಹಾಗೂ ವೈವಿಧ್ಯಪೂರ್ಣವಾದ ಪರಂಪರೆಗೆ ನಾನು ಹೆಮ್ಮೆ ಪಡುತ್ತೇನೆ.

ನಾನು ನನ್ನ ತಂದೆ, ತಾಯಿ ಮತ್ತು ಗುರುಹಿರಿಯರನ್ನು ಗೌರವಿಸುತ್ತೇನೆ. ಮತ್ತು ಎಲ್ಲರೊಡನೆ ಸೌಜನ್ಯದಿಂದ ವರ್ತಿಸುತ್ತೇನೆ.

ನಾನು ನನ್ನ ದೇಶ ಮತ್ತು ನನ್ನ ದೇಶದ ಜನರಿಗೆ ನನ್ನ ಶ್ರದ್ಧೆಯನ್ನು ಮುಡಿಪಾಗಿಡುತ್ತೇನೆ.ಅದರ ಕ್ಷೇಮ ಮತ್ತು ಸಮೃದ್ಧಿಯಲ್ಲೇ ನನ್ನ ಆನಂದವಿದೆ.

Kannada - I (Part I)

Prepared by
State Council of Educational Research and Training (SCERT)
Poojapura, Thiruvananthapuram - 695012 Kerala
website : scertkerala.gov.in. mail : scertkerala@gmail.com.
Phone : 0471-2341883. Fax : 0471-2341869
Typeset designed by : SCERT
First Edition : 2024
Printed at : KBPS Kakkanad, Kochi-30
© Department of General Education, Govt. of Kerala.

ಮುನ್ನುಡಿ

ಪ್ರೀತಿಯ ವಿದ್ಯಾರ್ಥಿಗಳೇ,

ಭಾಷೆ ಕೇವಲ ಸಂವಹನದ ಸಾಧನವಲ್ಲ. ಅದು ನಮ್ಮ ಕಣ್ಣಿಗೆ ಸರಿಸಮವಾಗಿದೆ. ನಾವು ದಿನನಿತ್ಯ ಕಲಿಯುವ ಭಾಷೆಯಲ್ಲಿ, ಅದರಲ್ಲೂ ಮಾತೃಭಾಷೆಯಲ್ಲಿ ಮಾತನಾಡಲು, ಓದಲು ಮತ್ತು ಬರೆಯಲು ಕೇವಲ ಮೂಲಭೂತ ಭಾಷಾ ಕೌಶಲ್ಯಗಳಿದ್ದರೆ ಮಾತ್ರ ಸಾಕಾಗುವುದಿಲ್ಲ.

ಭಾಷೆಯ ಪ್ರಮುಖ ಶಕ್ತಿಯೆಂದರೆ ಅದು ನಮ್ಮನ್ನು ಕಲ್ಪನೆಯ ಕ್ಷೇತ್ರದಿಂದ ಆಚೆಗೆ ಕೊಂಡೊಯ್ಯಬಲ್ಲುದು. ಸೃಜನಶೀಲ ವಿದ್ಯಾರ್ಥಿಗಳಿಗೆ ಭಾಷಾ ಶಿಕ್ಷಣ ಪ್ರೇರಕ ಶಕ್ತಿಯಾಗುತ್ತದೆ. ಕೆಲವರ ಭಾಷಾ ಶೈಲಿಯೇ ಅವರನ್ನು ಪ್ರತ್ಯೇಕವಾಗಿ ಗುರುತಿಸುವಂತೆ ಮಾಡುತ್ತದೆ. ನಾವೂ ನಮ್ಮದೇ ಆದ ಭಾಷೆಯನ್ನು ಬೆಳೆಸಿಕೊಳ್ಳುವುದನ್ನು ಕಲಿಯಬೇಕು.

ಪಠ್ಯಪುಸ್ತಕವು ಮುದ್ರಿತ ಪತ್ರಿಕೆಗಳ ಸಂಗ್ರಹವಲ್ಲ; ಅದರಲ್ಲಿ ಉತ್ತಮ ಶಿಕ್ಷಕರು, ವಿಜ್ಞಾನಿಗಳು ಮತ್ತು ತತ್ವಜ್ಞಾನಿಗಳು ಅಡಗಿರುತ್ತಾರೆ. ಪಠ್ಯಪುಸ್ತಕಗಳು ನಮ್ಮ ಬದುಕಿಗೆ ಮಾರ್ಗದರ್ಶಕವಾಗಿರುತ್ತವೆ, ಒಬ್ಬರಿಗೊಬ್ಬರು ಬೆರೆಯುವ ಗೆಳೆಯರಂತೆ ಇರುತ್ತವೆ, ಹಿತೈಷಿಗಳಂತೆ ಇರುತ್ತವೆ ಎನ್ನಬಹುದು. ಪಠ್ಯಪುಸ್ತಕವು ನಮಗೆ ಉಪಯುಕ್ತವಾಗಬೇಕು, ನಾವು ಸೇರಿರುವ ಸಮಾಜದ ಸುಖ-ದುಃಖಗಳಲ್ಲಿ ಭಾಗವಹಿಸುವಂತೆ ಮಾಡಬೇಕು ಮತ್ತು ನಾವು ವಾಸಿಸುವ ದೇಶದ ಅಭಿವೃದ್ಧಿಯಲ್ಲಿ ಭಾಗವಹಿಸಲು ಪ್ರೋತ್ಸಾಹಿಸಬೇಕು. ಎಲ್ಲಕ್ಕಿಂತ ಹೆಚ್ಚಾಗಿ ಉತ್ತಮ ಶಿಕ್ಷಕರ ಸಹಾಯದಿಂದ ನಮ್ಮ ಜ್ಞಾನವನ್ನು ಬೆಳೆಸಿಕೊಳ್ಳಲು ಅವು ಸಹಾಯ ಮಾಡಬೇಕು. ಸುದೃಢ, ಸ್ವಸ್ಥ ಸಮಾಜ ನಿರ್ಮಾಣಕ್ಕೆ ಪಠ್ಯಪುಸ್ತಕವು ಸಹಕಾರಿಯಾಗಬೇಕು. ಇವೆಲ್ಲವನ್ನೂ ಗಮನದಲ್ಲಿಟ್ಟುಕೊಂಡು ಈ ಪಠ್ಯಪುಸ್ತಕವನ್ನು ರೂಪಿಸಲಾಗಿದೆ.

ಭಾಷಾ ಪಠ್ಯಪುಸ್ತಕವು ನಿಮ್ಮ ಚಿಂತನೆಯನ್ನು ಶ್ರೀಮಂತಗೊಳಿಸಲಿ.

ಅಭಿನಂದನೆಗಳು,

ಡಾ. ಜಯಪ್ರಕಾಶ್ ಆರ್.ಕೆ.
ನಿರ್ದೇಶಕರು,
ಎಸ್.ಸಿ.ಇ.ಆರ್.ಟಿ., ಕೇರಳ

ತಿರುವನಂತಪುರ

TEXT BOOK DEVELOPMENT COMMITTEE
KANNADA I - PART 1

Advisor

Shivashankara P.	Asst. Professor, GPM College, Manjeshwar

Chairperson

Dr. Savitha B.	Asst Professor, Government College, Kasaragod

Experts

Dr. Narendra Rai Derla	Professor, GFW College, Puttur
Dr. T.K. Sharath Kumar	Associate Professor, GFGC Belthangady
Yatheesh Kumar Rai K.	Rtd. Principal, GHSS Belluru

Participants

Yashoda K.A.	HM, GUPS Adkathbail
Vanaja C.H.	LPST, GHSS Adhur
Surekha K.	LPST, GHS Peradala
Surekha A.	LPST, GUPS Kasaragod
Swathi S.	LPST, DIET Lab School, Maipady
Shruthi K.R.	LPST, DIET Lab School, Maipady
Jayalakshmi P.	LPST, ALPS Thottethody
Nishith K.B.	LPST, SSB AUPS Aila

Artists

Divakaran,	Rtd. Drawing Teacher, GHSS Kumbla
Jayaprakash Shetty	Drawing Teacher, SATHS Manjeshwara
Krishna Sharma K.	UPST, VAUPS Miyapadavu
Satheesh K.	Drawing Teacher, BRC Kumbla
Prakash	Drawing Teacher, BRC Manjeshwara
Sacheendran Karadka	Artist, Karadka

Academic Co-ordinator

Dr. Sahaya Dhas D.
Research Officer, SCERT, Thiruvananthapuram

ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಮಿತಿ (SCERT)
ವಿದ್ಯಾಭವನ ಪೂಜಪುರ, ತಿರುವನಂತಪುರ - 695 012

ಅನುಕ್ರಮಣಿಕೆ

ಕ್ರಮಸಂಖ್ಯೆ	ಘಟಕಗಳು	ಪುಟಗಳು
1.	ನಾವು ನಮ್ಮವರು	8 - 19
2.	ಕಾಡಿನತ್ತ ಪಯಣ	20 - 29
3.	ಆಹಾ! ಪರಿಮಳ	30 - 39
4.	ಮಳೆಯೋ ಮಳೆ	40 - 53
5.	ತಿನ್ನುವ ಬೆಳೆಯುವ	54 - 61
6.	ಘಾತಿಮಳ ತೋಟ	62 - 69
7.	ಓಡಿ ಆಡಿ ನಲಿಯಿರಿ	70 - 77
8.	ಐನಳ ಹುಟ್ಟುಹಬ್ಬ	78 - 84

ಈ ಪುಸ್ತಕದಲ್ಲಿ ಅನುಕೂಲಕ್ಕಾಗಿ ಕೆಳಗಿನ ಚಿಹ್ನೆಗಳನ್ನು ಉಪಯೋಗಿಸಲಾಗಿದೆ.

 ಓದುವ

 ಬಣ್ಣ ಹಚ್ಚುವ

 ಬರೆಯುವ

 ಹಾಡುವ

ಭಾರತದ ಸಂವಿಧಾನ

ಪ್ರಸ್ತಾವನೆ

ಭಾರತದ ಜನತೆಯಾದ ನಾವು,
ಭಾರತವನ್ನು ಸಾರ್ವಭೌಮ, ಸಮಾಜವಾದಿ, ಧರ್ಮನಿರಪೇಕ್ಷ
ಪ್ರಜಾಸತ್ತಾತ್ಮಕ ಗಣರಾಜ್ಯವನ್ನಾಗಿ
ರೂಪಿಸುವುದಕ್ಕಾಗಿ;
ಭಾರತದ ಎಲ್ಲಾ ಪ್ರಜೆಗಳಿಗೆ
ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯವನ್ನು;
ವಿಚಾರ, ಅಭಿವ್ಯಕ್ತಿ, ನಂಬಿಕೆ, ಧರ್ಮ ಮತ್ತು
ಉಪಾಸನೆಯ ಸ್ವಾತಂತ್ರ್ಯವನ್ನು;
ಸ್ಥಾನಮಾನ ಮತ್ತು ಅವಕಾಶಗಳ ಸಮಾನತೆಯನ್ನು
ದೊರೆಯುವಂತೆ ಮಾಡುವುದಕ್ಕಾಗಿ;
ವ್ಯಕ್ತಿಗೌರವ, ದೇಶದ ಏಕತೆ ಮತ್ತು ಸಮಗ್ರತೆಗಾಗಿ ಎಲ್ಲರಲ್ಲಿ
ಭ್ರಾತೃತ್ವ ಭಾವನೆಯನ್ನು ಮೂಡಿಸುವುದಕ್ಕೆ
ದೃಢಸಂಕಲ್ಪ ಮಾಡಿ,
ನಮ್ಮ ಸಂವಿಧಾನ ಸಭೆಯಲ್ಲಿ
1949ನೆಯ ಇಸವಿಯ ನವೆಂಬರ್ ತಿಂಗಳ 26ನೇ ದಿನದಂದು
ಈ ಸಂವಿಧಾನವನ್ನು ನಮಗೆ ನಾವೇ ಅರ್ಪಿಸಿಕೊಂಡು
ಅಂಗೀಕರಿಸಿ,
ಶಾಸನವಾಗಿ ವಿಧಿಸಿಕೊಂಡಿದ್ದೇವೆ.

ನನ್ನ ಬಗ್ಗೆ ...

ನನ್ನ ಹೆಸರು : .....



ಅಮ್ಮನ ಹೆಸರು : .....



ಅಪ್ಪನ ಹೆಸರು : .....



ನನ್ನ ಮನೆಯವರು



.....




.....



.....

1 ನಾವು ನಮ್ಮವರು





ದನ ದನ
ಲವನ ದನ
ಅಂದದ ದನ





ದನ

ಚುಕ್ಕೆ ಜೋಡಿಸಿ ಬರೆಯಿರಿ










ನಾಯಿಮರಿ ನಾಯಿಮರಿ
ತಿಂಡಿ ಬೇಕೆ?
ತಿಂಡಿ ಬೇಕು ತೀರ್ಥ ಬೇಕು
ಎಲ್ಲ ಬೇಕು.
ನಾಯಿಮರಿ ನಿನಗೆ ತಿಂಡಿ
ಏಕೆ ಬೇಕು?
ತಿಂದು ಗಟ್ಟಿಯಾಗಿ ಮನೆಯ
ಕಾಯಬೇಕು.









ಮರ ಮರ

ವರದನ ಮರ

ಆಲದ ಮರ

ಮರ ವರದ ಆಲ ಲವ



ಆಲದ ಮರ



ಆ ಮರ

ಆಲದ ಮರ

ಆ ದನ

ಲವನ ದನ

ಆ ಮನೆ

ವರದನ ಮನೆ









ಸಾಕು ಪ್ರಾಣಿಗಳನ್ನು ಗೆರೆ ಎಳೆದು ಮನೆಗೆ ಸೇರಿಸಿರಿ.













ಇವು ಯಾಕೆ ಬೇಕು?














ನನ್ನಿಂದ ಏನು ಸಿಗುತ್ತದೆ?



ಮಾಂಸ

ಗೊಬ್ಬರ





ಮೊಟ್ಟೆ

ಲ

ವ

ಶ


ಷ

ಸ

ಹ

ಳ


ಕ್ಷ




2 ಕಾಡಿನತ್ತ ಪಯಣ

ಕಥೆ ಕೇಳುವ

ಕಾಡಿನ ಹತ್ತಿರ ಮಾಲೂರು ಎಂಬ ಹಳ್ಳಿ. ಆ ಹಳ್ಳಿಯ ಮಾದನೆಂದರೆ ಕಾಡಿನ ಜೀವಿಗಳಿಗೆ ಬಹಳ ಇಷ್ಟ. ಮಾದನು ಕಟ್ಟಿಗೆ ಕಡಿಯಲು ಕಾಡಿಗೆ ಬಂದನು.



ಎಲ್ಲರಿಗೂ ಬುಟ್ಟಿ ತುಂಬ ಹಣ್ಣುಗಳನ್ನು ತಂದನು. 'ಆನೆಯಣ್ಣ, ಆನೆಯಣ್ಣ, ಮಾದ ಬರುತ್ತಿದ್ದಾನೆ' ಎಂದು ಪಿಂಕು ಮಂಗ ಹೇಳಿತು. ಎಲ್ಲರೂ ಮರದಡಿ ಸೇರಿದರು.


ಮಾದ ಬಂದನು.
ಅನನಾಸು ತಂದನು.
ಆನೆ ಬಂದಿತು.
ಮಂಗ ಬಂದಿತು.
ಇಲಿ ಮತ್ತು ಇರುವೆ ಬಂದುವು.

ಬಂದವರು ಯಾರೆಲ್ಲಾ? ಜೊತೆಗೊಳಿಸಿರಿ.



ಮಂಗ




ಆನೆ



ಇಲಿ





ಇರುವೆ

ಬೆರಳಚ್ಚು ಚಿತ್ರ ಬಿಡಿಸುವ, ಬಣ್ಣ ಹಚ್ಚುವ





















ಅನನಾಸು

ಇಲಿ











ಆನೆಯ ಜೊತೆಯಲಿ
ಆಮೆಯು ಬಂದಿತು
ಆಟವ ಆಡಲಿಕೆ
ಮಾವಿನ ಮರದಡಿ
ಇಲಿಯು ಬಂದಿತು
ಆಟವ ಆಡಲಿಕೆ
ಇರುವೆಯು ಮೆಲ್ಲನೆ
ಇಳಿಯುತ ಬಂದಿತು
ಆಟವ ನೋಡಲಿಕೆ

ಆ - ಅಕ್ಷರದ ಪದಗಳಿಗೆ ಉರುಟು ಹಾಕಿರಿ, ಬರೆಯಿರಿ.







ಕಾಡಿನಿಂದ ಏನೆಲ್ಲಾ?

ಸರಿಯಾದುದಕ್ಕೆ ✓ ಗುರುತು ಹಾಕಿರಿ.






















ಎಲೆ
ಮರದ ಎಲೆ
ಎಲೆ
ಉದುರಿತು





ಎಲೆ

ಮರದ .....

..... ಉದುರಿತು

3 ಆಹಾ ಪರಿಮಳ



ಹೂವು ಬೇಕೇ ಹೂವು
ಹೂವು ಬೇಕೇ ಹೂವು

ನಾಗಜ್ಜಿ ಬುಟ್ಟಿ ತುಂಬಾ
ಹೂವುಗಳನ್ನು ತಂದರು.
ತರ ತರದ ಹೂವುಗಳು
ಎಷ್ಟೊಂದು ಹೂವುಗಳು!






'ಅಜ್ಜೀ, ಇದು ಪಾರಿಜಾತ
ಹೂವಿನ ಮರ.
ಈ ಮರದಲ್ಲಿ ತುಂಬಾ
ಹೂವುಗಳು ಇವೆ.'
'ಆಹಾ!
ಒಳ್ಳೆಯ ಪರಿಮಳ'




ಪಾರಿಜಾತ

ಹೂವುಗಳು

ಪರಿಮಳ



ಮಲ್ಲಿಗೆ ಹೂವು ಅರಳಿತು.
ಪರಿಮಳವೇ ಪರಿಮಳ.
ಉಮ ಹೂವಿನ ಮಾಲೆ ಕಟ್ಟಿದಳು.
ಮಲ್ಲಿಗೆ ಹೂವಿನ ಮಾಲೆ.





ಹರಿ ಬಂದನು

ಮಂದಾರ ಹೂವು ತಂದನು

ತಾಹಿರ ಬಂದಳು

ತಾವರೆ ಹೂವು ತಂದಳು



ಉಮ	ಹರಿ	ತಾಹಿರ	ತಾವರೆ

..... ಅರಳಿತು

ಹರಿ ..... ತಂದನು

ತಾಹಿರ .....



ತಾವರೆ ಸಂಪಿಗೆ ಮಂದಾರ
ಚೆಲುವಿನ ಗುಲಾಬಿ ಸಿಂಗಾರ
ಬೆಳ್ಳಿಯ ಮಲ್ಲಿಗೆ ಸುಂದರ ಕೇದಗೆ
ಚಿನ್ನದ ಬಣ್ಣದ ಕರವೀರ



ಪರಿಮಳ ಇಲ್ಲದ ಹೂವುಗಳು



ಪರಿಮಳ ಇರುವ ಹೂವುಗಳು











ಅಬ್ಬಲಿಗೆ ದಾಸವಾಳ ಕರವೀರ

ಗುಲಾಬಿ ಸಂಪಿಗೆ ತಾವರೆ

ಪಾರಿಜಾತ ಮಲ್ಲಿಗೆ









ನನ್ನ ಕುರಿತು





ನಾನು ದಾಸವಾಳ
ನನಗೆ ಪರಿಮಳ ಇಲ್ಲ
ನನಗೆ ಹಲವು ಬಣ್ಣಗಳು ಇವೆ.
ನಾನು ಗಿಡದಲ್ಲಿ ಅರಳುತ್ತೇನೆ.



ನಾನು ಗುಲಾಬಿ


.....

.....

.....

.....

.....



ಮರದಲ್ಲಿ





ಗಿಡದಲ್ಲಿ



ನೀರಿನಲ್ಲಿ




ಬಳ್ಳಿಯಲ್ಲಿ



4 ಮಳೆಯೋ ಮಳೆ



ಚಂದನ ನದಿಯು ತುಂಬಿ ಹರಿಯುತ್ತಿತ್ತು. ಆ ನದಿಯಲ್ಲಿ ಹಲವಾರು ಜೀವಿಗಳು ವಾಸಿಸುತ್ತಿದ್ದುವು. ಮೀನು, ಕಪ್ಪೆ, ಏಡಿ, ಆಮೆ ಎಲ್ಲವೂ ಸಂತೋಷದಿಂದ ಇದ್ದುವು.


ಬೇಸಿಗೆ ಕಾಲ ಬಂತು. ನದಿಯಲ್ಲಿ
ನೀರು ಕಡಿಮೆಯಾಗುತ್ತಾ
ಬಂತು.



ನದಿಯ ಜೀವಿಗಳು ಒಂದೊಂದಾಗಿ ಸಮೀಪದ
ತಾವರೆಕೆರೆಗೆ ಹೋಗಲು ಆರಂಭಿಸಿದವು.
ಆದರೆ ಜಂಭದ ಗಪ್ಪಿ ಮೀನು ಮಾತ್ರ
ಹೋಗಲೇ ಇಲ್ಲ.



ನೀರು ಮತ್ತೂ ಕಡಿಮೆಯಾಯಿತು..
ಗಪ್ಪಿ ಮೀನಿಗೆ ಭಯವಾಯಿತು.
ಅದು ಅಳುತ್ತಾ
ಮಳೆರಾಯನನ್ನು ಕರೆಯಿತು.



ಗಪ್ಪಿ ಮೀನು : ಬಾರೋ ಬಾರೋ ಮಳೆರಾಯ

ಮಳೆರಾಯ : ಇಲ್ಲ ಬರಲಾರೆ


ಗಪ್ಪಿ ಮೀನು : ನೀರೆಲ್ಲ ಬತ್ತಿದೆ
ನೀರನ್ನು ಹುಯ್ಯೋ ಮಳೆರಾಯ
ಹುಯ್ಯೋ ಹುಯ್ಯೋ ಮಳೆರಾಯ

ಮಳೆರಾಯ ನಗುತ್ತಾ ಮುಂದೆ ಹೋದನು.





ಹುಯ್ಯೋ ಹುಯ್ಯೋ ಮಳೆರಾಯ
ಹೂವಿನ ತೋಟಕೆ ನೀರಿಲ್ಲ
ಬಾರೋ ಬಾರೋ ಮಳೆರಾಯ
ಬಾಳೆಯ ತೋಟಕೆ ನೀರಿಲ್ಲ
ಸುರಿಯೋ ಸುರಿಯೋ ಮಳೆರಾಯ
ಸಂಪಿಗೆ ತೋಟಕೆ ನೀರಿಲ್ಲ
ಕರೆಯೋ ಕರೆಯೋ ಮಳೆರಾಯ
ಕಬ್ಬಿನ ತೋಟಕೆ ನೀರಿಲ್ಲ



ಚಿತ್ರಕ್ಕೆ ಗುರುತು ಹಾಕುವ

ಮಳೆಗಾಲಕ್ಕೆ ಸಂಬಂಧಿಸಿದ ಚಿತ್ರಕ್ಕೆ  ಗುರುತು ಹಾಕಿರಿ.

ಬೇಸಿಗೆ ಕಾಲಕ್ಕೆ ಸಂಬಂಧಿಸಿದ ಚಿತ್ರಕ್ಕೆ  ಗುರುತು ಹಾಕಿರಿ.













ಚಿತ್ರದ ಆಧಾರದಲ್ಲಿ ಮಳೆಗಾಲದ ವಿಶೇಷತೆಗಳನ್ನು ಹೇಳಿರಿ.



ಆಕಾಶ ಕಪ್ಪಾಯಿತು. ಗಾಳಿ ಬೀಸಿತು.

ಮಿಂಚು ಮಿಂಚಿತು.

ಗುಡುಗು ಗುಡುಗಿತು. ಮಳೆ ಹನಿಯಿತು.

ಮಳೆಯು ಜೋರಾಯಿತು.



ಮಳೆ ಮಳೆ
ಗಾಳಿ ಮಳೆ
ಸಿಡಿಲು ಮಿಂಚು
ಗುಡುಗು ಮಳೆ
ಇಳೆಯ ತುಂಬ
ಬಿರುಸು ಮಳೆ
ಮಳೆಯಿಂದ
ಇಳೆಗೆ ಕಳೆ

ಎಲ್ಲೆಲ್ಲೂ ಮಳೆ





ಆನೆಯ ಮೇಲೆ ಮಳೆ









ಮನೆಯ ಮೇಲೆ ಮಳೆ



ಮಳೆ ಧಾರಾಕಾರವಾಗಿ ಸುರಿಯಿತು. ಮಳೆಯ ನೀರು ಹರಿಯತೊಡಗಿತು. ಹರಿದು ಹರಿದು ತೋಡನ್ನು ಸೇರಿತು. ತೋಡು ತುಂಬಿ ಹರಿಯಿತು. ಮುಂದೇನಾಗಿರಬಹುದು?

ಕಡಲು

ನೀರಿನ ಮೂಲಗಳು


ಹೊಳೆ

ಬಾವಿ

ತೋಡು

ಕೆರೆ


ಕಾಗದದ ದೋಣಿ ನಿರ್ಮಾಣ





ಅದೋ, 'ಬಣ್ಣದ
ದೋಣಿಯೊಂದು ತೇಲುತ್ತಾ
ಬರುತ್ತಿದೆಯಲ್ಲ' ಕಪ್ಪೆ ಹೇಳಿತು.


'ಅಲ್ಲಿ ನೋಡು, ಮಕ್ಕಳು ಕಾಗದದ
ದೋಣಿ ಬಿಡುತ್ತಿದ್ದಾರೆ.'
ಗಪ್ಪಿ ಹೇಳಿತು.



ದೋಣಿ ಕಪ್ಪೆಯ ಬಳಿ ತಲುಪಿತು. ಕಪ್ಪೆ ಅದರಲ್ಲಿ ಹತ್ತಿ ಕುಳಿತಿತು.
ಆಹಾ... ಎಷ್ಟು ಚಂದ! ದೋಣಿ ಮುಂದೆ ಸಾಗಿತು.
ಕಪ್ಪೆಗೆ ಖುಷಿಯಾಯಿತು.




5 ತಿನ್ನುವ ಬೆಳೆಯುವ






ಅಬಿಯ ಅಡುಗೆ ಮನೆ
ಅಡುಗೆ ಮನೆಯಲ್ಲಿ ಪಾತ್ರೆಗಳು.
ಚಮಚ, ಬಟ್ಟಲು, ಲೋಟ, ಮಡಕೆ,
ಹೀಗೆ ಹಲವು ...

ಅಡುಗೆ ಮನೆಯವರನ್ನು ಗುರುತಿಸಿ ಉರುಟು ಹಾಕಿರಿ.



ಕಾವಲಿ





ಸಟ್ಟುಗ



ಬಾಣಲೆ





ಚಮಚ



ಲೋಟ



ಬಟ್ಟಲು





ಬಾವಡೆ



ಮಡಕೆ



ಬಿಸಿ ಬಿಸಿ ದೋಸೆ



ಅಮ್ಮ ಅಕ್ಕಿ ತೊಳೆದರು.

ಅಕ್ಕಿಯನ್ನು ಅರೆದರು.

ಉಪ್ಪು ಸೇರಿಸಿದರು.

ಒಲೆಯ ಮೇಲೆ ಕಾವಲಿ ಇಟ್ಟರು.

ಹಿಟ್ಟು ಎರೆದರು.

.....


.....

.....

.....



ಅಬಿ ದೋಸೆ ತಿಂದನು.










ದೋಸೆ

ಒಲೆಯಲಿ ಕಾವಲಿ ಇಟ್ಟಳು ಅಮ್ಮ
ದೋಸೆಯ ಹೊಯ್ದಳು
ಚುಯಿಂ ಚುಯಿಂ ಚುಯಿಂ
ದೋಸೆಯ ಹೊಯ್ದು ಬಾವಡೆ ಮುಚ್ಚಿ
ಒಲೆ ಊದಿದಳು ಫೂ ಫೂ ಫೂ



ಬಾವಡೆ ತೆಗೆದಳು ದೋಸೆಯು ಬೆಂದಿತು
ನೋಡಲು ಎಷ್ಟು ಉರುಟುರುಟು
ಮಕ್ಕಳು ಎಲ್ಲರೂ ಸೇರುತ ತಿಂದರು
ಬಂದಿತು ತೇಗು ಢರ್ ಢರ್ ಢರ್






ಒಲೆಯ ಮೇಲೆ .....ಇಟ್ಟರು. (ಕಾವಲಿ/ಬಟ್ಟಲು)

..... ಮುಚ್ಚಿದರು. (ಬಾವಡೆ/ಮಡಕೆ)

ಅಬಿ ದೋಸೆ ..... (ತಿಂದನು/ಮಾಡಿದನು)

'ಡ' ಅಕ್ಷರದ ಗೆಳೆಯರನ್ನು ಬರೆಯೋಣ



ರುಚಿ ತಿಳಿಯೋಣವೆ

(ಹಾಗಲಕಾಯಿ, ಲಾಡು, ಮೆಣಸು, ಪಾಯಸ, ಲಿಂಬೆ, ಕಹಿಬೇವು, ಹುಣಸೆ, ಕರಿಮೆಣಸು)





ಸಿಹಿ

-
-

ಖಾರ

-
-

ಹುಳಿ

-
-

ಕಹಿ

-
-

ಶರಬತ್ತು ತಯಾರಿಸುವ

ಅಧ್ಯಾಪಕರೊಂದಿಗೆ ಸೇರಿ ತರಗತಿಯಲ್ಲಿ ಶರಬತ್ತು ತಯಾರಿಸಿರಿ.





ಬೇಯಿಸಿಯೂ ಬೇಯಿಸದೆಯೂ



ಗೆರೆ ಎಳೆದು ಜೋಡಿಸಿರಿ

ತರತರ ತಿಂಡಿಗಳು

ಚಪಾತಿ

ಸೇಮಿಗೆ

ಕಡುಬು

ಗೋಳಿಬಜೆ

ಪುಟ್ಟು

ದೋಸೆ

ಚಕ್ಕುಲಿ

ಇಡ್ಲಿ

ಪೂರಿ

ಪರೋಟ

ವಡೆ

ಎಣ್ಣೆ ತಿಂಡಿಗಳು



ಆವಿ ತಿಂಡಿಗಳು




ಕಾವಲಿ ತಿಂಡಿಗಳು



6 ಫಾತಿಮಳ ತೋಟ



ಇದು ಫಾತಿಮಾಳ ತರಕಾರಿ ತೋಟ. ತೋಟ ತುಂಬಾ ತರತರದ ತರಕಾರಿಗಳು. ಚಪ್ಪರದಲ್ಲಿ ಹಾಗಲ, ಪಡುವಲ ಮತ್ತು ಹೀರೇಕಾಯಿಗಳು ತೂಗಾಡುತ್ತಿವೆ.



ಗಿಡಗಳಲ್ಲಿ ಬದನೆ, ಮೆಣಸು ಮತ್ತು ಬೆಂಡೆಕಾಯಿಗಳು ಇದ್ದುವು. ನೆಲದಲ್ಲಿ ಹರಡಿದ ಬಳ್ಳಿಗಳಲ್ಲಿ ಚೀನಿಕಾಯಿ, ಕುಂಬಳಕಾಯಿ ಮತ್ತು ಸೌತೆಗಳು ಇದ್ದುವು. ತರಕಾರಿ ತೋಟ ನೋಡಿ ಮಕ್ಕಳಿಗೆ ತುಂಬಾ ಸಂತೋಷವಾಯಿತು.



ಬೆಂಡೆ ತೊಂಡೆ ಬಾಳೆಕಾಯಿ
ಹಾಗಲ ಪಡುವಲ ಕುಂಬಳಕಾಯಿ
ಹರಿವೆ ಬಸಳೆ ತರಕಾರಿ
ರುಚಿ ರುಚಿ ಊಟಕೆ ಉಪಕಾರಿ



ಸಾಲು ಸೇರಿಸುವ

ತರತರ ತರತರ ತರಕಾರಿ

ಚಪ್ಪರ ತುಂಬಾ ಪಡುವಲಕಾಯಿ

ತರತರ ತರತರ ತರಕಾರಿ

ಬಳ್ಳಿಯ ತುಂಬಾ .....

ತರತರ ತರತರ ತರಕಾರಿ

ಗಿಡದ ತುಂಬಾ .....

.....

.....

ಓದಿರಿ, ಬರೆಯಿರಿ

ಇದು ಬೆಂಡೆ
ಹಸಿರು ಬೆಂಡೆ
ಉದ್ದವಾದ ಬೆಂಡೆ







ಇದು ಪಡುವಲ
ಹಸಿರು .....
ಉದ್ದವಾದ .....
ಚಪ್ಪರದಲ್ಲಿ .....

ಇದು ಸೌತೆಕಾಯಿ
ಹಸಿರು .....
ಬಳ್ಳಿಯಲ್ಲಿ.....
ದೊಡ್ಡದಾದ .....





ಇದು .....
ನೀಲಿ .....
.....





ಗಿಡದಲ್ಲಿ





ಬಳ್ಳಿಯಲ್ಲಿ

ನನ್ನ ತೋಟದ ಚಿತ್ರ





ತರಕಾರಿಗಳ ಅಚ್ಚು ಒತ್ತಿ ಚಿತ್ರ ಬಿಡಿಸಿರಿ.

ಹೋಗೋಣ ಬಾರಾ

ಅಧ್ಯಾಪಕರ ಜೊತೆ ಶಾಲೆಯ ಸಮೀಪದ ತರಕಾರಿ ತೋಟಕ್ಕೆ ಹೋಗೋಣ.




7 ಓಡಿ ಆಡಿ ನಲಿಯಿರಿ

ದಿನೇಶನು ಅಡುಗೆ ಮನೆಗೆ ಬಂದನು.


'ಗಬ್ಬು ವಾಸನೆ' ಚಮಚ ಹೇಳಿತು.

ಒಲೆಯ ಬಳಿಗೆ ಬಂದನು.

ಒಲೆಯ ಮೇಲೆ ಮಡಕೆ.



ಮುಚ್ಚಳ ತೆಗೆದನು. ಕಡಲೆ ಗಸಿಯ ಪರಿಮಳ.
ಮಡಕೆಯ ಒಳಗೆ ಬೆರಳು ಹಾಕಿ ನೆಕ್ಕಿದನು.
'ಗಸಿ ಎಲ್ಲ ಹಾಳಾಯಿತು.'
ಬಟ್ಟಲು ಗಟ್ಟಿಯಾಗಿ ಹೇಳಿತು.



ಪದಗಳನ್ನು ಹುಡುಕಿ ಉರುಟು ಹಾಕಿರಿ

ಅಡುಗೆ ಕಡಲೆ ಗಸಿ ಮುಚ್ಚಳ
ಮಡಕೆ ಒಲೆ ಪರಿಮಳ





ಉಂಡಾಡಿ ಗುಂಡ .....

ಮದುವೆ ಮನೆಗೆ ಹೋದ

ಹತ್ತು ಲಾಡು ತಿಂದ

ಹೊಟ್ಟೆ ನೋವು ಎಂದ

ಅಮ್ಮ ಬೆಣ್ಣೆ ಕೊಟ್ಟರು

ಇನ್ನು ಬೇಕು ಎಂದ

ಅಪ್ಪ ದೊಣ್ಣೆ ತಂದರು

ಕೈಕಟ್ಟು ಬಾಯಿ ಮುಚ್ಚು

ಚಿತ್ರದೊಂದಿಗೆ ಗೆರೆ ಎಳೆದು ಜೋಡಿಸಿರಿ



ಶುಚಿಯಾದ ಬಟ್ಟೆ ಧರಿಸುವುದು



ಸ್ನಾನ ಮಾಡುವುದು



ಹಲ್ಲು ಉಜ್ಜುವುದು



ಕೈ ತೊಳೆಯುವುದು



ಉಗುರು ತೆಗೆಯುವುದು

ಯಾವುದು ಆರೋಗ್ಯಕ್ಕೆ ಉತ್ತಮ? ಉರುಟು ಹಾಕಿರಿ ಬರೆಯಿರಿ.















ದಿನೇಶನ ದಿನಚರಿ



ದಿನೇಶನು ಬೇಗನೆ ಎದ್ದನು.



ಹಲ್ಲು ಉಜ್ಜಿದನು.



ವ್ಯಾಯಾಮ ಮಾಡಿದನು.



ಸ್ನಾನ ಮಾಡಿದನು.



ತಿಂಡಿ ತಿಂದನು.



ದಿನೇಶನು ಶಾಲೆಗೆ ಹೊರಟನು

ಚಿತ್ರ ನೋಡಿ ✓ ಅಥವಾ X ಗುರುತು ಹಾಕಿರಿ.



















ಕ - ಕರಡಿ, ಕರು, ಕಮಲ






ಕಾ - ಕಾಗೆ, ..., ...



ಕಿ - ಕಿಟಿಕಿ, ..., ...





ಕೀ - ಕೀಲು, ..., ...







ಕು - ಕುದುರೆ, ..., ...


8 ಐನಳ ಹುಟ್ಟುಹಬ್ಬ

ಇಂದು ಐನಳ ಹುಟ್ಟುಹಬ್ಬ. ಗೀತ ಟೀಚರು ಮಕ್ಕಳೊಂದಿಗೆ ಐನಳ ಮನೆಗೆ ಬಂದರು. ಐನಳು ಹೊಸ ಉಡುಪು ಧರಿಸಿ ಜಗಲಿಯಲ್ಲಿ ಕಾಯುತ್ತಿದ್ದಳು. ಎಲ್ಲರೂ ಅವಳಿಗೆ ಹುಟ್ಟುಹಬ್ಬದ ಶುಭಾಶಯಗಳನ್ನು ಹೇಳಿದರು.

ಇಂದು ಯಾರ ಹುಟ್ಟುಹಬ್ಬ? _____

ಅವಳ ಮನೆಗೆ ಯಾರೆಲ್ಲ ಬಂದರು?

_____



ಐನ ಗೆಳೆಯರೊಂದಿಗೆ ದೋಣಿ ಮನೆಗೆ ತಲುಪಿದಳು. ಅದರ ಒಳಗೆ ಹೋಗಿ ನೋಡಲು ಎಲ್ಲರಿಗೂ ಕುತೂಹಲ. ಜಮೀಲಾ ಐನಳ ಗಾಲಿಕುರ್ಚಿಯನ್ನು ದೂಡಿದಳು. ಐನಳ ಅಮ್ಮನು ಜೊತೆಗೂಡಿದರು. ಎಲ್ಲರೂ ಅವರನ್ನು ಹಿಂಬಾಲಿಸಿದರು.





ಹಬ್ಬ ಹಬ್ಬ ಹುಟ್ಟುಹಬ್ಬ

ನೆಂಟರು ಗೆಳೆಯರು ಸೇರುವ ಹಬ್ಬ

ರುಚಿ ರುಚಿ ಕೇಕನು ತಿನ್ನುವ ಹಬ್ಬ

ಪಾಯಸದೂಟವ ಸವಿಯುವ ಹಬ್ಬ

ಅಪ್ಪನು ಅಮ್ಮನು ಅತ್ತೆಯು ಮಾವನು

ಉಡುಗೊರೆಯನು ನೀಡುವ ಹಬ್ಬ

ಹುಟ್ಟಿದ ದಿನದಲಿ ಹುಟ್ಟುಹಬ್ಬ

ಸಂತಸ ನೀಡುವ ಹುಟ್ಟುಹಬ್ಬ

ಐನಳ ಹುಟ್ಟುಹಬ್ಬ





ದೋಣಿಮನೆಯಲ್ಲಿ ಸಂಚರಿಸುವಾಗ ಅವರು ಕಂಡ ದೃಶ್ಯಗಳು ಯಾವುವು? ಚಿತ್ರ ಬಿಡಿಸಿರಿ.



ಸಂಜೆ ಆಯಿತು. ಎಲ್ಲರೂ ಮನೆಗೆ ಹಿಂತಿರುಗಿದರು. ಎಲ್ಲರ ಮನೆಯ ಸುತ್ತಲೂ ಹಣತೆಯ ಸಾಲುಗಳು. ಪಟ ಪಟ ಸಿಡಿಯುವ ಪಟಾಕಿಯ ಸದ್ದು. ಮನೆಯ ಮುಂದೆ ತೂಗಾಡುವ ಗೂಡುದೀಪಗಳು. ಎಲ್ಲಾ ಮನೆಗಳಲ್ಲೂ ದೀಪಾವಳಿಯ ಹಬ್ಬದ ಸಂಭ್ರಮ. ಅಮ್ಮಾ, 'ನನಗೂ ಪಟಾಕಿ ಬೇಕು.' ಐನ ಹೇಳಿದಳು.



ಅಮ್ಮ : ಯಾವ ಪಟಾಕಿ?

ಐನ : .....

ಅಮ್ಮ : .....

ಐನ : .....



ಓಣಂ

ಬಂತು ಬಂತು ಓಣಂ ಹಬ್ಬ
ಪೂವಲಿ ಹಾಕುವ ಹಬ್ಬ
ಬಂತು ಬಂತು ಓಣಂ ಹಬ್ಬ
ಎಲ್ಲರೂ ಸೇರುವ ಹಬ್ಬ
ಬಂತು ಬಂತು ಓಣಂ ಹಬ್ಬ
ಔತಣ ಸವಿಯುವ ಹಬ್ಬ
ಬಂತು ಬಂತು ಓಣಂ ಹಬ್ಬ
ಒಂದಾಗಿ ನಲಿಯುವ ಹಬ್ಬ





ಬಂತು ಬಂತು ಕ್ರಿಸ್‌ಮಸ್ ಹಬ್ಬ

.....

.....

.....

.....

.....

.....


.....

.....


ಎಷ್ಟೊಂದು ಹಬ್ಬಗಳು!

ಹಬ್ಬಗಳ ಹೆಸರು ಬರೆಯಿರಿ.





ಮರುದಿನ ಐನ ಅಮ್ಮನ ಜೊತೆಯಲ್ಲಿ ಶಾಲೆಗೆ ಬಂದಳು.
ಗೆಳೆಯರಿಗೆ ಮಿಠಾಯಿ ಹಂಚಿದಳು.
ಶಾಲೆಯ ಘಂಟೆ ಬಾರಿಸಿತು. ಎಲ್ಲರೂ ಮೈದಾನಕ್ಕೆ
ಇಳಿದರು. ಐನಳ ಜೊತೆ ಆಟ ಆಡಿದರು.
ಥಕ ಥೈ ಥಕ ಥೈ ಕುಣಿದಾಡಿದರು.
ಐನಳಿಗೆ ಬಹಳ ಸಂತೋಷವಾಯಿತು.



ಚಿತ್ರದಲ್ಲಿ ಕಾಣುವ ಸಾರ್ವಜನಿಕ ಸಂಸ್ಥೆ ಯಾವುದು?



ಚಿತ್ರದಲ್ಲಿರುವ ಸಾರ್ವಜನಿಕ
ಸ್ಥಳ ಯಾವುದು?

ಭಾರತದ ಸಂವಿಧಾನ

ಭಾಗ IV ಕ

ಕರ್ತವ್ಯಗಳು

51ಕ. **ಮೂಲಭೂತ ಕರ್ತವ್ಯಗಳು – ಈ ಕೆಳಗಿನವುಗಳು ಭಾರತದ ಪ್ರತಿಯೊಬ್ಬ ಪೌರನ ಕರ್ತವ್ಯಗಳಾಗಿವೆ.**

(ಕ) ಸಂವಿಧಾನವನ್ನು ಅನುಸರಿಸುವುದು, ಅದರ ಆದರ್ಶಗಳನ್ನು, ಸಂಸ್ಥೆಗಳನ್ನು ರಾಷ್ಟ್ರಧ್ವಜವನ್ನು ಮತ್ತು ರಾಷ್ಟ್ರಗೀತೆಯನ್ನು ಗೌರವಿಸುವುದು;

(ಖ) ನಮ್ಮ ರಾಷ್ಟ್ರೀಯ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸ್ಫೂರ್ತಿದಾಯಕವಾದ ಉದಾತ್ತ ಆದರ್ಶಗಳನ್ನು ಪೋಷಿಸುವುದು ಮತ್ತು ಅನುಸರಿಸುವುದು.

(ಗ) ಭಾರತದ ಸಾರ್ವಭೌಮತೆಯನ್ನು, ಏಕತೆಯನ್ನು ಮತ್ತು ಅಖಂಡತೆಯನ್ನು ಗೌರವಿಸುವುದು ಹಾಗೂ ಸಂರಕ್ಷಿಸುವುದು.

(ಘ) ದೇಶವನ್ನು ರಕ್ಷಿಸಲು ಮತ್ತು ರಾಷ್ಟ್ರಕ್ಕೆ ಸೇವೆ ಸಲ್ಲಿಸಲು ಕರೆ ಬಂದಾಗ ಅದನ್ನು ಅನುಸರಿಸುವುದು.

(ಙ) ಧಾರ್ಮಿಕ, ಭಾಷಿಕ ಮತ್ತು ಪ್ರಾದೇಶಿಕ ಅಥವಾ ಜಾತಿ ಪಂಗಡಗಳ ಭಿನ್ನತೆಗಳಿಂದ ಅತೀತವಾಗಿ ಭಾರತದ ಎಲ್ಲ ಜನತೆಯಲ್ಲಿ ಸಾಮರಸ್ಯವನ್ನು ಮತ್ತು ಭ್ರಾತೃತ್ವದ ಭಾವನೆಯನ್ನು ಬೆಳೆಸುವುದು, ಸ್ತ್ರೀಯರ ಗೌರವಕ್ಕೆ ಕುಂದುಂಟುಮಾಡುವ ಆಚರಣೆಯನ್ನು ಬಿಟ್ಟು ಬಿಡುವುದು.

(ಚ) ನಮ್ಮ ಸಂಸ್ಕೃತಿಯ ಭವ್ಯ ಪರಂಪರೆಯನ್ನು ಗೌರವಿಸುವುದು ಹಾಗೂ ಕಾಪಾಡುವುದು.

(ಛ) ಅರಣ್ಯಗಳು, ಸರೋವರಗಳು, ನದಿಗಳು ಮತ್ತು ವನ್ಯಜೀವಿಗಳು ಸೇರಿದಂತೆ ನೈಸರ್ಗಿಕ ಪರಿಸರವನ್ನು ಸಂರಕ್ಷಿಸುವುದು ಹಾಗೂ ಅಭಿವೃದ್ಧಿ ಮಾಡುವುದು, ಪ್ರಾಣಿಗಳಿಗೆ ಅನುಕಂಪ ತೋರಿಸುವುದು.

(ಜ) ವೈಜ್ಞಾನಿಕ ಮನೋಭಾವ, ಮಾನವೀಯತೆ, ಜಿಜ್ಞಾಸೆ ಮತ್ತು ಸುಧಾರಣ ಪ್ರವೃತ್ತಿಯನ್ನು ಬೆಳೆಸುವುದು.

(ಝ) ಸಾರ್ವಜನಿಕ ಸೊತ್ತನ್ನು ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು.

(ಞ) ರಾಷ್ಟ್ರವು ನಿರಂತರವಾಗಿ ಸಾಧನೆ ಮತ್ತು ಸಿದ್ಧಿಯ ಔನ್ನತ್ಯಕ್ಕೆ ತಲುಪಲು ವೈಯಕ್ತಿಕ ಹಾಗೂ ಸಾಮಾಜಿಕ ಚಟುವಟಿಕೆಯ ಎಲ್ಲ ಕಾರ್ಯಕ್ಷೇತ್ರಗಳಲ್ಲಿ ಪ್ರಾಮಾಣಿಕವಾಗಿ ಶ್ರಮಿಸುವುದು.

(ಟ) ಆರರಿಂದ ಹದಿನಾಲ್ಕು ವರ್ಷಗಳ ನಡುವಿನ ತನ್ನ ಮಕ್ಕಳಿಗೋ, ತನ್ನ ರಕ್ಷಣೆಲ್ಲಿರುವ ಮಕ್ಕಳಿಗೋ ಆಯಾ ಸಂದರ್ಭಾನುಸಾರ ಹೆತ್ತವರೋ ರಕ್ಷಕರೋ ವಿದ್ಯಾಭ್ಯಾಸಕ್ಕಿರುವ ಅವಕಾಶವನ್ನು ಏರ್ಪಡಿಸುವುದು.

ಮಕ್ಕಳ ಹಕ್ಕುಗಳು

ಪ್ರೀತಿಯ ಮಕ್ಕಳೇ,

ನಿಮ್ಮ ಹಕ್ಕುಗಳ ಕುರಿತು ತಿಳಿಯಬೇಕಲ್ಲವೇ? ಹಕ್ಕುಗಳ ಕುರಿತಾಗಿರುವ ತಿಳುವಳಿಕೆಯು ನಿಮ್ಮ ಭಾಗವಹಿಸುವಿಕೆ, ಸಂರಕ್ಷಣೆ, ಸಾಮಾಜಿಕ ನ್ಯಾಯ ಎಂಬಿವುಗಳನ್ನು ಖಾತರಿಪಡಿಸಲು ಪ್ರೇರಣೆಯನ್ನೂ ಪ್ರಚೋದನೆಯನ್ನೂ ನೀಡುತ್ತದೆ. ನಿಮ್ಮ ಹಕ್ಕುಗಳನ್ನು ಸಂರಕ್ಷಿಸಲು ಈಗ ಒಂದು ಆಯೋಗವು ಕಾರ್ಯಾಚರಿಸುತ್ತಿದೆ. 'ಕೇರಳ ಪ್ರಾಂತ್ಯ ಮಕ್ಕಳ ಹಕ್ಕು ಸಂರಕ್ಷಣ ಆಯೋಗ' ಎಂದು ಅದರ ಹೆಸರು. ನಿಮ್ಮ ಹಕ್ಕುಗಳು ಯಾವುವು ಎಂದು ನೋಡೋಣ.

- ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ.
- ಜೀವ ಮತ್ತು ವ್ಯಕ್ತಿ ಸ್ವಾತಂತ್ರ್ಯದ ರಕ್ಷಣೆ.
- ಪರಿಪೂರ್ಣವಾದ ಬದುಕು ಹಾಗೂ ವಿಕಾಸದ ಹಕ್ಕು.
- ಜಾತಿ, ಮತ, ವರ್ಗ, ವರ್ಣ ಎಂಬ ಚಿಂತನೆಗಳನ್ನು ಮೀರಿ ಗೌರವಿಸಲ್ಪಡುವ ಮತ್ತು ಅಂಗೀಕರಿಸಲ್ಪಡುವ ಹಕ್ಕು.
- ದೈಹಿಕ, ಮಾನಸಿಕ ಹಾಗೂ ಲೈಂಗಿಕ ದೌರ್ಜನ್ಯಗಳಿಂದ ರಕ್ಷಣೆ ಪಡೆಯಲೂ ಶುಶ್ರೂಷೆ ಪಡೆಯಲೂ ಇರುವ ಹಕ್ಕು.
- ಬಾಲ ಕಾರ್ಮಿಕತನದಿಂದ ಹಾಗೂ ಅಪಾಯಕಾರಿ ಕೆಲಸಗಳಿಂದ ಬಿಡುಗಡೆ.
- ಪಾಲ್ಗೊಳ್ಳುವಿಕೆಯ ಹಕ್ಕು.
- ಬಾಲ್ಯವಿವಾಹದಿಂದ ರಕ್ಷಣೆ.
- ವೈಯಕ್ತಿಕ ಸಂಸ್ಕೃತಿಯನ್ನು ಅರಿತುಕೊಂಡು ಅದನ್ನು ಅನುಸರಿಸಿ ಬದುಕುವ ಸ್ವಾತಂತ್ರ್ಯ.
- ನಿರ್ಲಕ್ಷ್ಯಕ್ಕೆ ಒಳಗಾಗದಂತೆ ಸಂರಕ್ಷಣೆ.
- ಉಚಿತ ಹಾಗೂ ಕಡ್ಡಾಯ ಶಿಕ್ಷಣದ ಹಕ್ಕು.
- ಕಲಿಯಲೂ ಆಟವಾಡಲೂ ಇರುವ ಹಕ್ಕು.
- ಪ್ರೀತಿ ಹಾಗೂ ರಕ್ಷಣೆಯನ್ನು ಒದಗಿಸುವ ಕುಟುಂಬ ಹಾಗೂ ಸಮಾಜವನ್ನು ಪಡೆಯುವ ಹಕ್ಕು.

ನಿಮ್ಮ ಕೆಲವು ಜವಾಬ್ದಾರಿಗಳು

- ಶಾಲೆ, ಸಾರ್ವಜನಿಕ ಸೊತ್ತುಗಳನ್ನು ಹಾನಿ ಮಾಡದೆ ರಕ್ಷಿಸುವುದು.
- ಶಾಲೆಯಲ್ಲಿ ಹಾಗೂ ಕಲಿಕಾ ಚಟುವಟಿಕೆಗಳಲ್ಲಿ ಶಿಸ್ತು ಪಾಲಿಸುವುದು.
- ಶಾಲಾ ಅಧಿಕಾರಿಗಳನ್ನು, ಅಧ್ಯಾಪಕರನ್ನು, ಹೆತ್ತವರನ್ನು ಹಾಗೂ ಸಹಪಾಠಿಗಳನ್ನು ಗೌರವಿಸುವುದು ಮತ್ತು ಅಂಗೀಕರಿಸುವುದು.
- ಜಾತಿ, ಮತ, ವರ್ಗ, ವರ್ಣ ಇತ್ಯಾದಿ ಚಿಂತನೆಗಳನ್ನು ಮೀರಿ ಇತರರನ್ನು ಗೌರವಿಸಲೂ ಅಂಗೀಕರಿಸಲೂ ಸಿದ್ಧರಾಗುವುದು.

ಸಂಪರ್ಕಿಸಬೇಕಾದ ವಿಳಾಸ

ಕೇರಳ ಪ್ರಾಂತ್ಯ ಮಕ್ಕಳ ಹಕ್ಕು ಸಂರಕ್ಷಣ ಆಯೋಗ

'ಶ್ರೀ ಗಣೇಶ್', ಟಿ.ಸಿ. 14/2036, ವಾನ್ ರೋಸ್ ಜಂಕ್ಷನ್, ತಿರುವನಂತಪುರ-34

ಫೋನ್ : 0471-2326603

E-mail : childrightscpcr@kerala.gov.in, rtecpcr@kerala.gov.in

Website : www.kescpcr.kerala.gov.in.

ಮಕ್ಕಳ ಸಹಾಯವಾಣಿ : 1098, ಅಪರಾಧ ನಿಯಂತ್ರಣ : 1090, ನಿರ್ಭಯ : 1800 425 1400

ಕೇರಳ ಪೋಲೀಸ್ ಸಹಾಯವಾಣಿ : 0471-3243000/44000/45000

Online R.T.E Monitoring : www.nireekshana.org.in